

# ಆಹಾ ಸುದ್ದಿ!

★ ಸಸಿತೋಟ



ಅಫ್ಘಾನಿಸ್ತಾನದ ಡಾ.ಅಮಿನ್ ಶಿರ್ಘಾದ್ ಮನೆ ತುಂಬಾ ಮಾತ್ರವಲ್ಲ, ಮುಖದ ತುಂಬಾ ಪ್ರೀತಿಯ ಚೇಳುಗಳು. ಮನೆಯಲ್ಲೇ 400 ಚೇಳುಗಳನ್ನು ಸಾಕಿಕೊಂಡಿರುವ ಈ ವೈದ್ಯ ಚೇಳಿನ ವಿಷದಿಂದ ಕುಷ್ಠ ಮತ್ತು ಮೂರ್ಛೆ ರೋಗಕ್ಕೆ ಔಷಧ ನೀಡುತ್ತಾರಂತೆ. ಚೇಳಿನಿಂದ ಕುಟುಕಿಸಿಕೊಂಡರೆ ಅಯ್ಯೋ ಎಂದು ಚೀರಿಕೊಳ್ಳುವ ಬದಲು ಚೇಳು ವೈದ್ಯೋ ಭವ ಎಂದು ಮಂತ್ರ ಜಪಿಸಬಹುದು.



ವಾಷಿಂಗ್ಟನ್ನಿನ ಸಾಕು ಪ್ರಾಣಿಗಳ ತಿನಿಸುಗಳ ಅಂಗಡಿಯ ಮಾಲಕಿ ಡೊರೊತಿ ಹಂಟರ್ ಒಂದು ತಿಂಗಳ ಕಾಲ ನಾಯಿ, ಬೆಕ್ಕು ಮತ್ತು ಹಕ್ಕಿಗಳ ಆಹಾರವನ್ನು ಮಾತ್ರ ತಿನ್ನುತ್ತಾಳಂತೆ. ಈ ಪ್ರಾಣಿಗಳ ಆಹಾರ ಎಷ್ಟು ಪೌಷ್ಟಿಕ ಎಂಬುದನ್ನು ತಿಳಿಸುವ ಉದ್ದೇಶಕ್ಕಾಗಿ ಈ ಒಂದು ತಿಂಗಳ ಪ್ರಾಣಿಗಳ ಡಯಟ್ ಅಂತೆ. ಇದನ್ನು ನೋಡಿದ ಮಾನವ ಮಾತ್ರರು ಮಾಮೂಲು ಡಯಟ್ ಬಿಟ್ಟು ಪ್ರಾಣಿಗಳ ಡಯಟ್ ಫುಡ್ ಶುರು ಮಾಡಿಬಿಟ್ಟರೆ..! ಬೆಕ್ಕು, ನಾಯಿ, ಹಕ್ಕಿಗಳನ್ನು ಕೊಯ್ದು ತಿಂದಾಯ್ತು, ಪಾಪ ಈಗ ಅವುಗಳ ಆಹಾರವನ್ನೇ ಕಬಳಿಸ ಹೊರಟಿದ್ದಾರೆ ಮಾನವರು.

ಅಮೆರಿಕಾದ ಮೆಸ್ಸಾಚುಸೆಟ್ಸ್‌ನಲ್ಲಿ ಪ್ರೊಬೇಷನ್ ಮೇಲೆ ಜೈಲಿನಿಂದ ಹೊರಬಂದಿದ್ದ ಜಾನ್ ಕಿರ್ವಾನ್. ಅಂಗಡಿಯಲ್ಲಿ ಸಿಗರೇಟ್ ಪಡೆದು ಹಣ ನೀಡದೇ ಅಂಗಡಿಯಾತನಿಗೆ ಪೊಲೀಸರನ್ನು ಕರೆಯುವಂತೆ ಹೇಳಿದನಂತೆ. ಪೊಲೀಸರು ಜಾನ್‌ನನ್ನು ಬಂಧಿಸಿ ಕಳವು ಯತ್ನಕ್ಕೆ ಕಾರಣ ಕೇಳಿದರಂತೆ. ಜಾನ್ ಕೂಲಾಗಿ 'ಕಳುವನ್ನೇ ಮಾಡಿದ್ದೆ, ಜೈಲಿಗೆ ಮರಳಿ ಹೋಗುವ ಸಲುವಾಗಿ' ಎಂದನಂತೆ. ಜೈಲಿಗೆ ಹೋಗುವುದಾದರೆ ಸಣ್ಣಪುಟ್ಟ ಸಿಗರೇಟ್ ಕಳವು ಯಾಕೆ, ಬ್ಯಾಂಕನ್ನೇ ಲೂಟಿ ಮಾಡಿ, ಹಣದಿಂದ ಮಜಾ ಮಾಡಿ ಹೋಗಬಹುದಿತ್ತೇ!



ಟೋಕಿಯೋದಲ್ಲಿ ನಡೆಯುತ್ತಿರುವ 'ಟಾಯ್ಲೆಟ್: ಮಾನವ ಕಶ್ಮಲ ಹಾಗೂ ಭೂಮಿಯ ಭವಿಷ್ಯ' ಕುರಿತ ಪ್ರದರ್ಶನದಲ್ಲಿ ಇಟ್ಟಿರುವ 16.4 ಅಡಿ ಎತ್ತರದ ಟಾಯ್ಲೆಟ್. ಇದರೊಳಗೆ ಜಾರಿ ಹೋದರೆ ಮಾನವ ಮಲ ತಯಾರಾಗಿ ಚರಂಡಿ ಸೇರುವವರೆಗಿನ ಪ್ರಕ್ರಿಯೆಯನ್ನು ವೀಕ್ಷಿಸಬಹುದಂತೆ. ಜೊತೆಗೆ ಗಿಡವನ್ನು ಬೆಳೆಸಬಹುದಾದ ಟಾಯ್ಲೆಟ್ ಕೂಡಾ ಪ್ರದರ್ಶನದಲ್ಲಿದೆಯಂತೆ. ಟಾಯ್ಲೆಟ್‌ನಲ್ಲಿ ಗಿಡಗಳನ್ನು ಇಟ್ಟರೆ ಗಿಡಗಳ ಎಡೆಯಲ್ಲಿ ಟಾಯ್ಲೆಟ್ ಮಾಡಬಹುದಾ?



ಚೀನಾ ಝೇಜಿಯಾಂಗ್ ಪ್ರಾಂತ್ಯದಲ್ಲಿ ಚಾಲಕನೊಬ್ಬ ಕಾರಿಗೆ ಹ್ಯಾಂಡ್‌ಬ್ರೇಕ್ ಹಾಕುವುದನ್ನು ಮರೆತು ಇಳಿಜಾರಿನಲ್ಲಿ ನಿಲ್ಲಿಸಿ ಹೋದನಂತೆ. ನಿಮಿಷದಲ್ಲಿ ತಿರುಗಿ ನೋಡಿದರೆ ಕಾರೇ ಇಲ್ಲ. ಕಾರು ನೀಟಾಗಿ ಮರವನ್ನು ಏರಿ ಕೂತಿದೆ. ಕಾರನ್ನೇನೋ ಕ್ರೇನ್‌ನಿಂದ ಎತ್ತಿ ಕೆಳಗಿಳಿಸಲಾಗಿದೆ. ಆದರೆ ಪರಿಸರ ಹಾಳು ಮಾಡಿದ್ದಕ್ಕೆ ಚಾಲಕನನ್ನು ಪೊಲೀಸರು ಬೆಂಡ್ ಎತ್ತುತ್ತಿದ್ದಾರಂತೆ.

ಚೀನಾದ ಹೋಟೆಲ್ ಒಂದರಲ್ಲಿ ನೂಡಲ್ಸ್‌ನಲ್ಲಿ ಪಾಲು ನೀಡಲೊಪ್ಪದ ಯುಲ್ ಎಂಬ ವ್ಯಕ್ತಿಯ ಮೇಲೆ ಆತನ ಗೆಳೆಯ ಬೋ ಎಂಬಾತ ಜಗಳ ತೆಗೆದನಂತೆ. ಜಗಳ ವಿಕೋಪಕ್ಕೆ ಹೋಗಿ ಬೋ ಚಾಕುವಿನಿಂದ ಯುಲ್‌ನ ಕತ್ತು ಸೀಳಿ ಹೃದಯವನ್ನು ಹೊರತೆಗೆದನಂತೆ. ಎಲ್ಲರೂ ನೋಡ ನೋಡುತ್ತಿದ್ದಂತೆ ಆ ಹೃದಯವನ್ನೇ ಕಚ್ಚಿ ತಿನ್ನಲಾರಂಭಿಸಿದನಂತೆ. ವಿನಿಮಯ ಪದ್ಧತಿಯಲ್ಲಿ ನೂಡಲ್ಸ್ ಬದಲಾಗಿ ಹೃದಯ ಎಂದು ಬೋ ಎಲ್ಲಿ ಓದಿಕೊಂಡಿದ್ದನೋ!